ಶ್ರೀ ಆಲೂರು ಹನುಮಂತಪ್ಪ.—ನಮ್ಮ ದೇಶದಲ್ಲೂ ಸುಭಿಕ್ಷ ಪರಿಸ್ಥಿತಿ ಉಂಟಾಗುವ ಕಾಲ ಬೇಗ ಬರುವುದರಲ್ಲಿದೆ. ಆದರೆ ಇಲ್ಲಿ ಬರತಕ್ಕ ಅಚ್ಚುಕಟ್ಟೆಲ್ಲ ಕೇವಲ 4½ ಎಕರೆಗಳು ಮಾತ್ರ. ಆದರೆ ಅನೇಕರಿಂದ ಅಬ್‌ಜೆಕ್ಷೇಗಳೂ ಬಂದವು. ಅದರ ನಲುವಾಗಿ ನಬ್‌ಮರ್‌ಷ್ ಏರಿಯಾ ಕಡಮೆ ಮಾಡಬೇಕಾಯಿತು. ಅದರಿಂದ ಸ್ವಲ್ಪ ತಡವಾಯಿತು.

ಶ್ರೀ ವಿ. ಎಂ. ದೇವ್.—ನಾನು ಉತ್ತರದಲ್ಲಿ (ಉ) ಗೆ ಹೇಳಿರತಕ್ಕ ಉತ್ತರ ಎರ್ಲೋ ಪ್ರಿಂಟಿಂಗ್ ಮಿಸ್ಟೇಕ್ ಇರಬೇಕೆಂದು ತಿಳಿದಿದ್ದೆ. ಆದರೆ ಮಂತ್ರಿಗಳು ಹೇಳುತ್ತಿರುವುದೂ ಸಹ ಈ ಉತ್ತರಕ್ಕೆ ಅನುಗುಣವಾಗಿರುವುದರಿಂದ ಈಗ ಸರ್ಕಾರದವರು ಒವಗಿಸಿರತಕ್ಕ ಉತ್ತರ ಪ್ಯಾಂಡಲಜಂ ಎಂತ ಕಾಣುತ್ತದೆ. ಆ ಕೆರೆಗೆ ನೀರು ವರಮಾನ ಬೇಕಾದಷ್ಟಿದ್ದಾಗ ಆ ಕೆರೆಯಲ್ಲಿ ಹೆಚ್ಚು ನೀರು ತಡೆಯುದೆ ಅದನ್ನು ತಗ್ಗಿಸಲು ಕಾರಣವೇನು ? ಇದಕ್ಕೆ ಸರ್ಕಾರದವರು ಸರಿಯಾದ ವಿವರಣೆ ಕೊಡುತ್ತಿರೋ-ಇಲ್ಲವೋ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಇಲ್ಲಿ ನಾವೀಗ ಹೊಸದಾಗಿ ಕೆರೆಯನ್ನು ಕಟ್ಟುತ್ತಿಲ್ಲ. ಹಳೇ ಕೆರೆಯನ್ನೇ ಬದಾವಣೆ ಮಾಡುತ್ತಿದ್ದೆವೆ. ಇಲ್ಲಿರತಕ್ಕ ಪ್ರಶ್ನೆ ಕೋಡಿಯನ್ನು ಒಂದು ಅಡಿ ಎತ್ತರಿಸಬೇಕೆಂದೂ, ಏರಿಯನ್ನು ಎರಡು ಅಡಿ ಎತ್ತರಿಸಬೇಕೆಂದೂ ಇಲ್ಲಿ ತಗ ಅಂದಾಜಾಗಿದೆ.

ಶ್ರೀ ಕೆ ಪಿ. ರೇವಣ್ಣಸಿದ್ಧಪ್ಪ.— ಈ 42 ಸಾವಿರ ರೂಪಾಯಿಗಳ ಅಂದಾಜಿನ ಕೆರೆ ರಿಪೇರಿಗಾಗಿ ಚೀಫ್ ಇಂಜಿನಿಯರು 2 ಸಾರ್ತಿ, ಅವರ ಕೆಳಗಿರತಕ್ಕ ಸೂಪರಿಂಟಿಂಡಿಂಗ್ ಇಂಜಿನಿಯರು ಬಂದು ಮೂರು ನಾಲ್ಕು ಸಾರ್ತಿ, ಅವರ ಕೈ ಕೆಳಗಿರತಕ್ಕ ಎಗ್ಸಿಕ್ಯುಟೀವ್ ಇಂಜಿನಿಯರು ಬಂದು ಎಂಟು-ಹತ್ತು ಸಾರ್ತಿ ಮತ್ತು ಅವರ ಕೈಕೆಳಗಿನ ಅಸಿಸ್ಟೆಂಟ್ ಇಂಜಿನಿಯರುಗಳ ಹತ್ತು-ಹದಿನೈದು ಸಾರ್ತಿ ತಿರುಗಿದ್ದಾರೆ. ಇಷ್ಟು ಜನರು ಕಳೆದ 8 ವರ್ಷಗಳಲ್ಲಿ ಮಾಡಿರತಕ್ಕ ಆ ತಿರುಗಾಟದಲ್ಲಿ ಎಷ್ಟು ಯೋಜನೆಗಳನ್ನು ತಯಾರಿಸಬಹುದಿತ್ತು ? ಈ ಕೆಲಸ ಹೀಗೆ ಮುಳ್ಕ ಬಿದ್ದರು ಯಾರ ಪ್ರಭಾವ ?

ಶ್ರೀ ಆಲೂರು ಹನುಮಂತಪ್ಪ.—ಸ್ವಲ್ಪ ಮಟ್ಟಿಗೆ ತಾವೂ ಪ್ರಭಾವ ಶಾಲಿಗಳೇ. ನಬ್‌ಮರ್‌ಷ್ ಕಡಮೆಮಾಡಲು ಆ ಅಧಿಕಾರಿಗಳೇ ಅಲ್ಲಿ ಕಡೆಗೆ ಸರ್ಕಾರದವರೂ ಹೋಗಿ ನೋಡ ಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—8 ವರ್ಷಗಳಿಂದ ಈ ಕೆಲಸ ಹಿಂದಕ್ಕೆ ಬೀಳಲು ಆ ಅಳತೆ ಪೆಟ್ಟಿಗೆ ದುರ್ಬೀನ್ ಪೆಟ್ಟಿಗೆಗಳು ಇದ್ದಿರಲಿಲ್ಲವೋ ?

ಶ್ರೀ ಆಲೂರು ಹನುಮಂತಪ್ಪ.—ಅವುಗಳಲ್ಲಿ ಬೇಕಾದಷ್ಟಿವೆ.

Starting of an Industrial Estate at Kolar Gold Fields.

*Q.—156. **Sri S. RAJAGOPAL** (K. G. F.).—

Will the Government be pleased to state :—

(*a*) whether they are aware that the previous Ministry had decided to start an Industrial Estate at Kolar Gold Fields ;

(*b*) if so, at what stage the matter stands now ?

A.—**Sri K. MALLAPPA** (Minister for Industries and Commerce).—

(*a*) Yes.

(*b*) The construction work of the Industrial Estate is being taken up shortly.

ಶ್ರೀ ಇ. ನಾರಾಯಣಗೌಡ.—ಈ ಕೈಗಾರಿಕೆ ಎಸ್ಟೇಟಿಗೆ ಸೈಟು ಸೆಲೆಕ್ಟ್ ಆಗಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಕೋಲಾರದ ಚಿನ್ನದಗಣಿ ಪ್ರದೇಶದವರು 15 ಎಕರೆ ಜಮೀನು ಕೊಟ್ಟಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಈ ಕೈಗಾರಿಕಾ ಎಸ್ಟೇಟಿನ ಸ್ಥಳವನ್ನೇನಾದರೂ ಬದಲಾವಣೆ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಆ ವಿಚಾರವೇನೂ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಸ್ಥಾಪನೆ ಮಾಡತಕ್ಕ ಸ್ಥಳವನ್ನೇನಾದರೂ ಬದಲಾವಣೆ ಮಾಡಲಾಗಿದೆಯೇ?

ಶ್ರೀ ಕೆ. ಮಲ್ಲಪ್ಪ.—ಮೊದಲು ಈ ಎಸ್ಟೇಟನ್ನು ಗೌರಿಬಿದನೂರಿನಲ್ಲಿ ಮಾಡಬೇಕೆಂಬ ಆಲೋಚನೆಯಿತ್ತು. ಅದರೆ ಇತ್ತೀಚೆಗೆ ಅಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನೆಯಾದ್ದರಿಂದ ಈಗ ಇದನ್ನು ಚಿಕ್ಕಬಳ್ಳಾಪುರಕ್ಕೆ ಬದಲಾಯಿಸಿದೆ. ಇಲ್ಲಿ ಯಾವ ವಿಧವಾದ ಕೈಗಾರಿಕೆಗಳೂ ಇರಲಿಲ್ಲವೆಂಬುದೇ ಕಾರಣ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ಚಿಕ್ಕಬಳ್ಳಾಪುರದಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಅನುಕೂಲವಿದೆ ಎಂಬುದನ್ನು ಪರಿಶೀಲನೆ ಮಾಡಲಾಗಿತ್ತೇ?

ಶ್ರೀ ಕೆ. ಮಲ್ಲಪ್ಪ.—ಎಲ್ಲಿ ಇಂಡಸ್ಟ್ರೀಸ್‌ಗಳಿಲ್ಲವೋ ಅಲ್ಲಿ ಇಂಡಸ್ಟ್ರಿ ಸ್ಥಾಪಿಸಬೇಕೆಂಬುದು ಸರ್ಕಾರದವರ ನೀತಿ. ಇಲ್ಲಿ ಮೆಷಿನ್ ಪಾರ್ಟುಗಳನ್ನು ಮಾಡಲು ಅವಕಾಶವಿದೆ, ಫೌಂಡ್ರಿ ಫ್ಯಾಬ್ರಿಕೇಷನ್ ಇವುಗಳನ್ನೆಲ್ಲಾ ಮಾಡಬಹುದು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರದ ಕಟ್ಟಡದ ಕೆಲಸ ಎಷ್ಟಾಗಿದೆ. ಅಲ್ಲಿ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಕೆ. ಮಲ್ಲಪ್ಪ.—ಕಟ್ಟಡದ ಕೆಲಸ ಪ್ರಾರಂಭವಾಗಿದೆ. ಅದನ್ನು ಶೀಘ್ರದಲ್ಲೇ ಪೂರೈಸಲಾಗುತ್ತದೆ.

2-50 P.M.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನಮ್ಮ ರಾಜ್ಯದೊಳಗೆ ಇಂಡಸ್ಟ್ರಿಯಲ್ ಎಸ್ಟೇಟ್ ಎಷ್ಟುಕಡೆ ಕೊಟ್ಟಿದ್ದೀರಿ, ಉಳಿದಕಡೆ ಯಾವಾಗ ಕೊಡುತ್ತೀರಿ?

ಶ್ರೀ ಕೆ. ಮಲ್ಲಪ್ಪ.—ಈಗ 8 ಪ್ರಾರಂಭವಾಗಿವೆ. ಶೀಘ್ರದಲ್ಲಯೇ ಪೂರೈಸುತ್ತೇವೆ.

ಶ್ರೀ ಇ. ನಾರಾಯಣಗೌಡ.—ಇದಕ್ಕೋಸ್ಕರ ಅಂದಾಜು ಏನಾದರೂ ತಯಾರಾಗಿದೆಯೇ?

ಶ್ರೀ ಕೆ. ಮಲ್ಲಪ್ಪ.—K.G F. ನಲ್ಲಿ 14 ಷೆಡ್‌ಗಳನ್ನು ಕಟ್ಟಲು ನಾಲ್ಕು ಲಕ್ಷ ಚಿಲ್ಲರೆಗೆ ಅಂದಾಜು ತಯಾರಾಗಿ, ಪ್ಲಾನ್ ತಯಾರಾಗಿ Director of Small-Scale Industrise ಇವರ ಕಡೆ ಮಂಜೂರಾತಿಗೆ ಕಳಿಸಿದೆ.

ಶ್ರೀ ವಿ. ಎಂ. ಪಿಳ್ಳಪ್ಪ.—ಈ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಯಾರು ಯಾರಿಗೆ ಕೊಡುತ್ತೀರಿ?

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಕಟ್ಟಲಾಗುವ ಷೆಡ್‌ಗಳಲ್ಲಿ ಯಾರು ಕೈಗಾರಿಕೆ ನಡೆಸುವುದಕ್ಕೆ ಮುಂದೆ ಬರುತ್ತಾರೆಯೋ ಅವರಿಗೆ ಕೊಡುತ್ತೇವೆ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Transfer of Executive Engineers of the Public Works Divisions in Bangalore District.

*Q.—100. Sri S. KARIAPPA (Kanakapura)—

Will the Government be pleased to state:—

(*a*) the names of Public Works Divisions in Bangalore District which the Executive Engineers are kept—

(i) for two years or more; and

(ii) for three years or more;

(*b*) the reasons for continuing them in the same place even after completion of the prescribed period;